ಏರಿದೆತ್ತರವೊ ಇಳಿದ ಪ್ರಪಾತದಾಳದ ಸಂಕೇತವೊ ಖಚಿತವಾಗಲಿಲ್ಲ. ಬುದ್ಧಿಗೆ ತಾತ್ಕಾಲಿಕವಾಗಿ ಹಿತಮಂಕನ್ನು ಕವಿಸುವ ಪಾನಲೋಕದಲ್ಲಿ ಬಹಳಷ್ಟು ಸಂಗತಿಗಳು ಅಸ್ಪಷ್ಟವಾಗೇ ಉಳಿಯುತ್ತವೆ. ಎಂತಲೇ ತಕ್ಕ ಶಿಷ್ಯ ಸಿಕ್ಕರೆ, ಕರ್ನಾಟಕದ ಪಾನಸಂಸ್ಕೃತಿಯ ಮೇಲೆ ಸಂಶೋಧನೆ ಮಾಡಿ ಸ್ಪಷ್ಟತೆ ಪಡೆಯಬೇಕು ಎಂಬ ಉದ್ದೇಶ ನನ್ನೊಳಗೆ ಸ್ಪಿರಿಟ್ಟಿನ ದೀಪದಂತೆ ಉರಿಯುತ್ತಿದೆ.

ಸಮಸ್ಯೆಯೆಂದರೆ, ಸಿಗಲಿರುವ ಶಿಷ್ಯನು ಅಧ್ಯಯನಕ್ಕೆ ಸ್ವಾನುಭವದ ಅಗತ್ಯವಿದೆಯೆಂದು ಪಟ್ಟುಹಿಡಿದರೆ? ಕ್ಷೇತ್ರಕಾರ್ಯಕ್ಕೆ ಹೋದವನು ತೈಲಪನಾಗಿ ಮರಳಿಬಾರದೆ ಹೋದರೆ? ಅಧ್ಯಯನ ಎಲ್ಲಿಗೆ ಬಂತೆಂದು ಕೇಳಿದರೆ, ವನದೇವತೆಯ ಮುಖಕ್ಕೆ ಹೊಡೆದ ಸೌದೆಯವನಂತೆ ಉತ್ತರಿಸಿದರೆ? ಮೊದಲೇ ಪಾನಪೂರ್ವದಲ್ಲಿ ಮಾಡಿದ ವಾಗ್ದಾನ ಈಡೇರಿಸಬೇಕೆಂಬ ನಿಯತಿಕೃತ ನಿಯಮರಹಿತ ಜಗತ್ತಿದು. ತಾಪತ್ರಯವೇ ಬೇಡ. ನಾನೇ ಪಾನಸಂಸ್ಕೃತಿ ಗ್ರಂಥವನ್ನು ವಿರಚಿಸುವೆ. ಅದರಲ್ಲಿ ಪ್ರೇಮದ, ಅಧಿಕಾರದ, ಕಲೆಯ, ಹಣದ, ಧರ್ಮದ, ಅಧ್ಯಾತ್ಮದ, ಯುದ್ಧದ, ಹೆಣ್ಣಿನ, ಗಂಡಿನ, ಮಕ್ಕಳ – ಹೀಗೆ ಲೋಕಸಮಸ್ತ ನಶೆಗಳನ್ನು ಪ್ರಸ್ತಾಪಿಸುವೆ. ಆಗಲಾದರೂ ರಾತ್ರಿಗೇರಿ ನಸುಗಿಕಿಳಿಯುವ ಮದಿರೆಯ ನಶೆಗಿಂತ ಹೆಚ್ಚು ಘಾತಕವಾದ ಮದ್ಯಗಳನ್ನು ಮಂದಿಗೆ ಕುಡಿಸಲಾಗುತ್ತಿದೆ ಎಂಬ ದಿಟವಾದರೂ ಬಯಲಾದೀತು. ಧರ್ಮಸೆರೆಯನ್ನು ಹೀರಿ ಮೆರೆಯುತ್ತಿರುವವರ ಮುಂದೆ ಮಲೆನಾಡಿನ ಪಾನನಿರೋಧಿ ಭಾಷಣಕಾರರೂ ಚಂದಮಾಮ ಕತೆಯ ಸೌದೆಕಾರನೂ ಹಸುಗೂಸುಗಳು ಎಂದು ಮನದಟ್ಟಾದೀತು; ಮಾನವಂತರು ತಮ್ಮ ಶ್ರೇಷ್ಠಬಾಳಿನ ಮೂಲಕ ಸೃಷ್ಟಿಸಿರುವ ಪ್ರೀತಿತುಂಬಿದ ಜೀವದಾಯಕ ಅಮೃತವು, ನಂಜೇರಿ ನರಳುವ ನತದೃಷ್ಟರ ಬೀದಿಗಳಲ್ಲಿ ಪ್ರವಾಹವಾಗಿ ಹರಿಯಲಿ, ಅದನ್ನು ಕುಡಿದು ಅದರೊಳಗೆ ಮಿಂದು ನಮ್ಮ ಆತ್ಮಕ್ಕಂಟಿರುವ ಕಳಂಕಗಳನ್ನು ತೊಡೆದುಕೊಳ್ಳೋಣ ಎಂದು ಹಂಬಲ ಸಹೃಯದರಲ್ಲಿ ಹುಟ್ಟೀತು. ಆವಾಹನೆ ಮಾಡಿದ್ದೆಲ್ಲ ಕರೆದ ತಕ್ಷಣ ಅವತರಿಸಲಿಕ್ಕಿಲ್ಲ. ಆದರೆ ಮಾನವೀಯ ಕರೆ–ಕನಸು ನಿಲಬಾರದು. ಉಮರ್ ಖಯಾಮ ಪಾನಪ್ರತಿಮೆಗಳಲ್ಲಿ ಆವಾಹಿಸಿದ್ದು ಇಂಥವೇ ಕನಸುಗಳನ್ನು. ಇವನ್ನೇ ಬೇಂದ್ರೆ 'ಈ ತುಂಬಿಬಾಳು ತುಂಬಿರುವ ತನಕ ತುಂಬ್ತುಂಬಿ ಕುಡಿಯಬೇಕು' ಎಂದು ಕನ್ನಡಿಸಿದರು. ದಣಿದಜೀವಕ್ಕೆ ಚೈತನ್ಯ ತುಂಬಬಲ್ಲ ಯಾವುದೇ ಪಾನ, ಶರೀರನಾಶ ಮಾಡಿ ಸಂಸಾರಗೇಡಿಯಾಗಬೇಕು ಎಂದು ಯಾವ ದಾರ್ಶನಿಕರು ತಾನೇ ನುಡಿದರು?

## ರಹಮತ್ ತರೀಕೆರೆ

ಕನ್ನಡದ ಪ್ರಮುಖ ಲೇಖಕ ರಹಮತ್ ಚಿಕ್ಕಮಗಳೂರು ಜಿಲ್ಲೆಯ ತರೀಕೆರೆಯವರು. ಸಾಹಿತ್ಯ ವಿಮರ್ಶೆ, ಸಂಶೋಧನೆ, ಪ್ರವಾಸ ಕಥನ, ವಿಚಾರ ಸಾಹಿತ್ಯ, ಜೀವನ ಚರಿತ್ರೆ ಸಾಹಿತ್ಯ ಮೀಮಾಂಸೆ ಪ್ರಕಾರಗಳಲ್ಲಿ ಪುಸ್ತಗಳನ್ನು ಬರೆದಿದ್ದಾರೆ. ನಾಡು ಸುತ್ತುವ ದಾಹ, ಮೋಹ ಇರುವ ಅವರ ಪ್ರಕಟಿತ ಪ್ರಮುಖ ಪುಸ್ತಕಗಳು: 'ಪ್ರತಿಸಂಸ್ಕೃತಿ', 'ಮರದೊಳಗಣ ಕಿಚ್ಚು', 'ಅಮೀರ್‌ಬಾಯಿ ಕರ್ನಾಟಕಿ', 'ನಡೆದಷ್ಟೂ ನಾಡು', 'ಕರ್ನಾಟಕದ ನಾಥ ಪಂಥ', 'ಕರ್ನಾಟಕದ ಸೂಫಿಗಳು' 'ಅಂಡಮಾನ್ ಕನಸು', 'ಕತ್ತಿಯಂಚಿನ ದಾರಿ', 'ಲೋಕವಿರೋಧಿಗಳ ಜೊತೆಯಲ್ಲಿ'. ರಹಮತ್, ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಸಾಹಿತ್ಯ ಅಧ್ಯಯನ ವಿಭಾಗದಲ್ಲಿ ಪ್ರಾಧ್ಯಾಪಕರು.